ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಪರಿಷತ್ತಿನ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ          ದಿನಾಂಕ : DATE : 21/02/2020

# ಗೋಲಿಬಾರ್ ಪ್ರಕರಣ ಸದನ ಸಮಿತಿಗಿಲ್ಲ: ಬೊಮ್ಮಾಯಿ

## ಮೇಲ್ಮನೆಯಲ್ಲೂ ಉತ್ತರ: ಪ್ರತಿಪಕ್ಷಗಳ ಸಭಾತ್ಯಾಗ



• **ಕನ್ನಡಪ್ರಭ ವಾರ್ತೆ** ವಿಧಾನಪರಿಷತ್ತು ಮಂಗಳೂರುಗೋಲಿಬಾರ್ ಪ್ರಕರಣವನ್ನು ಸದನಸಮಿತಿಯಿಂದತನಿಖೆನಡೆಸಬೇಕೆಂಬ ಬೇಡಿಕೆಗೆ ಸ್ಪಂದಿಸದ ಸರ್ಕಾರದ ನಿಲುವನ್ನು ಖಂಡಿಸಿಪ್ರತಿಪಕ್ಷಗಳಸದಸ್ಯರುಸಭಾತ್ಯಾಗ ಮಾಡಿದರು.

ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುರಿತು ನಡೆದ ಚರ್ಚೆಯ ನಂತರ ಗೃಹ ಸಚಿವ ಬಸವರಾಜ ಬೊಮ್ಮಾಯಿ ಉತ್ತರಿಸಿ ರಾಜ್ಯದಲ್ಲಿ ಈವರೆಗೆ ನಡೆದ ಯಾವುದೇ ಗೋಲಿಬಾರ್ ಪ್ರಕರಣದ ತನಿಖೆಗೆ ಸದನ ಸಮಿತಿ ರಚಿಸಿದ ಉದಾಹರಣೆ ಇಲ್ಲ. ಈಗಾಗಲೇ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಸಿಐಡಿ ತನಿಖೆ ನಡೆಸಿದೆ. ಹೀಗಾಗಿ ಸದನ ಸಮಿತಿ ರಚಿಸಿ ತನಿಖೆನಡೆಸುವುದಿಲ್ಲ ಎಂದರು. ಇದರಿಂದ ಅಸಮಾಧಾನಗೊಂಡ ವಿಪಕ್ಷಗಳ ಸದಸ್ಯರು ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆ ಕೂಗುತ್ತಾ ಸಭಾತ್ಯಾಗ ಮಾಡಿದರು.

ಮಂಗಳೂರು ಗೋಲಿಬಾರ್ ಘಟನೆಯಲ್ಲಿ ಎಲ್ಲ ಕಡೆ ಗಲಾಟೆ ನಿಯಂತ್ರಿಸಲು ಪ್ರಯತ್ನಿಸಿದ್ದೇವೆ. ಪೊಲೀಸರು ನಿಯಮದ ಪ್ರಕಾರವೇ ಮುನ್ನೆಚ್ಚರಿಕೆ ಕ್ರಮವಾಗಿ ಅಶ್ರುವಾಯು, ರಬ್ಬರ್ ಬುಲೆಟ್, ಗಾಳಿಯಲ್ಲಿಗುಂಡುಹಾರಿಸಿದ್ದರು. ಆದರೂ ಪ್ರತಿಭಟನಾಕಾರರು ಪೆಟ್ರೋಲ್ ಬಾಂಬ್ ಹಿಡಿದು ದಾಳಿಗೆಮುಂದಾದಾಗಅನಿವಾರ್ಯವಾಗಿ ಗೋಲಿಬಾರ್ ಮಾಡಬೇಕಾಯಿತು. ಮಂಗಳೂರು ಗೋಲಿಬಾರ್ ಪ್ರಕರಣದಲ್ಲಿ ಪೊಲೀಸರುತಪ್ಪುಮಾಡಿಲ್ಲ. ಸಮರ್ಥವಾಗಿ ಪರಿಸ್ಥಿತಿ ನಿಭಾಯಿಸಿದ್ದಾರೆ ಎಂದರು.

**ಪರಿಹಾರ ತಡೆ ಸಮರ್ಥನೆ:** ಗೋಲಿಬಾರ್ ಪ್ರಕರಣದಲ್ಲಿ ಮೃತಪಟ್ಟವರ ಕುಟುಂಬಕ್ಕೆ ಸರ್ಕಾರ ಪರಿಹಾರ ಘೋಷಿಸಿ ನಂತರ ತಡೆ ಹಿಡಿದಕ್ರಮವನ್ನುಸಮರ್ಥಿಸಿಕೊಂಡ ಗೃಹ ಸಚಿವರು, ಮುಖ್ಯಮಂತ್ರಿಗಳು ಮಾನವೀಯ ದೃಷ್ಟಿಯಿಂದ ಪರಿಹಾರ ಘೋಷಿಸಿದ್ದರು. ಆದರೆ, 2007ರಲ್ಲಿ ಮುಲ್ಕಿಯಲ್ಲಿನಡೆದಗೋಲಿಬಾರ್ ಪ್ರಕರಣದಲ್ಲೂ ಇಬ್ಬರುಮೃತಪಟ್ಟಿದ್ದರು. ಅವರುಆರೋಪಿಗಳಾಗಿದ್ದರಿಂದಪರಿಹಾರವನ್ನುತಡೆಹಿಡಿಯಲಾಗಿದೆ. ಈಗಮಂಗಳೂರುಗೋಲಿಬಾರ್ ಪ್ರಕರಣದಲ್ಲಿ ಮೃತರು ಆರೋಪಿಗಳಾಗಿದ್ದಾರೆ. ಅವರಿಗೆ ಪರಿಹಾರ ಕೊಡುವುದಕ್ಕೂ ಮುನ್ನ ಮುಲ್ಕಿ ಪ್ರಕರಣ ಇತ್ಯರ್ಥಪಡಿಸಬೇಕಿದೆ. ಬಳಿಕ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ ಎಂದು ಸ್ಪಷ್ಟಪಡಿಸಿದರು.

16